# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಎಂವೈಎಸ್/3054/2019/ಎಆರ್ಇ-20

ಬಹುಮಹಡಿಗಳ ಕಟ್ಟಡ
ಡಾ:ಅಂಬೇಡ್ಕರ್ ವೀಧಿ
ಬೆಂಗಳೂರು-560 001
ದಿನಾಂಕ 17-8-2023

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3) ರಡಿ ವರದಿ

ವಿಷಯ: ಈ ಕೆಳಕಂಡ ಸರ್ಕಾರಿ ಅಧಿಕಾರಿಗಳ ದುರ್ನಡತೆ/ಕರ್ತವ್ಯ ಲೋಪದ ಕುರಿತು;

(1) ಡಾ|| ಎಸ್.ಎಲ್. ನಾಗರಾಜ್, ಅಂದಿನ ಅಧ್ಯಕ್ಷರು, ಮಾದರಿ ಶಾಲಾ ಉನ್ನತೀಕರಣ ಸಮಿತಿ, ಶತಮಾನದ ಶಾಲೆ, ಕೃಷ್ಣರಾಜಪೇಟೆ ಟೌನ್ ಹಾಗೂ ಹಾಲಿ ಉಪವಿಭಾಗಾಧಿಕಾರಿಗಳು, ಚಿಕ್ಕಮಗಳೂರು ಉಪವಿಭಾಗ, ಚಿಕ್ಕಮಗಳೂರು ಜಿಲ್ಲೆ.

(2) ಶ್ರೀ ಎಸ್. ಲಕ್ಷ್ಮೀಕಾಂತ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.

(3) ಶ್ರೀ ಕೆ.ವಿ. ರವಿ ಬಿನ್ ದಿ.ಕಾಳಯ್ಯ, ಕಿರಿಯ ಅಭಿಯಂತರರು, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ

(4) ಶ್ರೀ ಬಸವರಾಜು, ಅಂದಿನ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.

****

ಶ್ರೀ ಹೆಚ್.ಬಿ. ಮಂಜುನಾಥ ಬಿನ್ ಹೆಚ್. ಬೀರಯ್ಯ, ವಾಸ: ಹೇಮಾವತಿ ಲೇಔಟ್, ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ ಸಲ್ಲಿಸಿದ **(ಇನ್ನು ಮುಂದೆ "ಫಿರ್ಯಾದಿದಾರರು" ಎಂದು ಕರೆಯಲ್ಪಡುತ್ತಾರೆ)** ಇವರು ಪ್ರಪತ್ರ 1 ಮತ್ತು 2 ರಂತೆ ಸಲ್ಲಿಸಿದ ದೂರಿನಲ್ಲಿ ಸರ್ಕಾರಿ/ಸಾರ್ವಜನಿಕ ಅಧಿಕಾರಿ/ನೌಕರರಾದ (1) ಡಾ|| ಎಸ್.ಎಲ್. ನಾಗರಾಜ್, ಅಧ್ಯಕ್ಷರು, ಮಾದರಿ ಶಾಲಾ ಉನ್ನತೀಕರಣ ಸಮಿತಿ, ಶತಮಾನದ ಶಾಲೆ,

ಕೃಷ್ಣರಾಜಪೇಟೆ ಟೌನ್ ಹಾಗೂ ಹಾಲಿ ಉಪವಿಭಾಗಾಧಿಕಾರಿಗಳು, ಚಿಕ್ಕಮಗಳೂರು ಉಪವಿಭಾಗ, ಚಿಕ್ಕಮಗಳೂರು ಜಿಲ್ಲೆ, (2) ಶ್ರೀ ಎಸ್. ಲಕ್ಷ್ಮೀಕಾಂತ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಅವರ ವಿರುದ್ಧ ಸಲ್ಲಿಸಿದ ದೂರಿನಲ್ಲಿ, (3) ಶ್ರೀ ಕೆ.ವಿ. ರವಿ ಬಿನ್ ದಿ.ಕಾಳಯ್ಯ, ಕಿರಿಯ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಮತ್ತು (4)ಶ್ರೀ. ಬಸವರಾಜು, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ **(ಇನ್ನು ಮುಂದೆ "ಎದುರುದಾರರ-1, 2, 3 ಮತ್ತು 4" ಎಂದು ಅನುಕ್ರಮವಾಗಿ ಕರೆಯಲ್ಪಡುತ್ತಾರೆ)**, ರವರನ್ನು ಸೇರ್ಪಡೆಗೊಳಿಸಿ ಕರ್ನಾಟಕ ಲೋಕಾಯುಕ್ತ ಕಾಯ್ದೆ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2) ಫಿರ್ಯಾದಿದಾರರು ತಮ್ಮ ಫಿರ್ಯಾದಿಯಲ್ಲಿ ಈ ಕೆಳಗಿನ ಆರೋಪಗಳನ್ನು ಮಾಡಿರುತ್ತಾರೆ;

ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ಪಟ್ಟಣದಲ್ಲಿರುವ ಶತಮಾನದ ಸರ್ಕಾರಿ ಶಾಲೆಯ ಕಟ್ಟಡವನ್ನು ಜಿಲ್ಲಾ ಪಂಚಾಯಿತಿಯ ಅಭಿವೃದ್ಧಿ ಅನುದಾನದ ಲೆಕ್ಕ ಶೀರ್ಷಿಕೆ 2515-00-101-031-101 ರಲ್ಲಿ ರೂ.1,99,441/- ಖರ್ಚು ಮಾಡಿ ಮೆಟ್ಟಿಲು, ಕೊಠಡಿ ದುರಸ್ಥಿ, ಬಣ್ಣ ಸೇರಿದಂತೆ ಮತ್ತಿತರ ಕಾಮಗಾರಿಯನ್ನು ನಿರ್ವಹಿಸಲಾಗಿದೆ.

ಈ ಬಗ್ಗೆ ಶಾಲಾ ಕಟ್ಟಡದಲ್ಲಿ ದುರಸ್ಥಿ ಮಾಡಿದ ಬಗ್ಗೆ ನಾಮಫಲಕವನ್ನು ಬರೆಯಲಾಗಿರುತ್ತದೆ. ಆದರೆ ಇದೇ ಕಾಮಗಾರಿ ಮಾಡಿರುವುದಾಗಿ ಮೋತಿ ಹಾರ್ಡ್‌ವೇರ್‌ಗೆ ರೂ.1,14,191/- ಮೆಟ್ಟಿಲು ನಿರ್ಮಾಣಕ್ಕೆಂದು ರೂ.38,000/- ದುರಸ್ಥಿ ಮಾಡಿರುವುದಾಗಿ ಬಣ್ಣ ಹೊಡೆದಿರುವ ಲೇಬಲ್‌ಗೆ ರೂ.10,000/- ಒಟ್ಟು ರೂ.1,62,191/- ಗಳನ್ನು ಉನ್ನತೀಕರಣ ಸಮಿತಿಯ ಖಾತೆಯಿಂದ ಹಣ ಬಿಡುಗಡೆ

ಮಾಡಲಾಗಿದೆ. ಒಂದೇ ಸಮಯದಲ್ಲಿ ಒಂದೇ ಕೆಲಸಕ್ಕೆ ಎರಡು ಕಡೆಗಳಲ್ಲಿ ಹಣ ಬಿಡುಗಡೆ ಮಾಡಿ ಹಣ ದುರ್ಬಳಕೆ ಮಾಡಲಾಗಿದೆ.

3) ಪೋಷಕರಿಂದ ಮಕ್ಕಳಿಗೆ ಸಮವಸ್ತ್ರ, ಪುಸ್ತಕ ಮತ್ತು ಶ್ಯೂಗಳನ್ನು ನೀಡಲು 2015-16ನೇ ಸಾಲಿನಲ್ಲಿ ರೂ.4,22,800/-ಗಳನ್ನು ಮತ್ತು 2016-17ನೇ ಸಾಲಿನಲ್ಲಿ ರೂ.5,39,900/-ಗಳನ್ನು ಸಂಗ್ರಹ ಮಾಡಲಾಗಿದ್ದು 2015-16ನೇ ಸಾಲಿನಲ್ಲಿ ಸಮವಸ್ತ್ರಕ್ಕಾಗಿ 2,20,656/-ರೂಪಾಯಿಗಳು ಮತ್ತು ಪುಸ್ತಕಕ್ಕಾಗಿ 56,584/-ರೂಪಾಯಿಗಳನ್ನು, ಒಟ್ಟು 2,77,204/-ರೂ.ಗಳನ್ನು ಖರ್ಚು ಮಾಡಲಾಗಿರುತ್ತದೆ ಹಾಗೂ 2016-17ನೇ ಸಾಲಿನಲ್ಲಿ ಸಮವಸ್ತ್ರಕ್ಕಾಗಿ 2,75,006/-ರೂ.ಗಳು ಮತ್ತು ಪುಸ್ತಕಕ್ಕಾಗಿ 54,047/-ರೂ.ಗಳು ಮತ್ತು ಶೂಗಳಿಗಾಗಿ 21,156/-ರೂಗಳು, ಸಾಕ್ಸ್‌ಗಾಗಿ 2,000/-ರೂಪಾಯಿಗಳು, ಒಟ್ಟು 3,58,209/-ರೂಪಾಯಿ ಖಚ್ಚು ಮಾಡಲಾಗಿದೆ ಉಳಿಕೆ 1,81,691/-ರೂಗಳು ಎರಡು ವರ್ಷಗಳಲ್ಲಿ ಒಟ್ಟು 3,27,287/-ರೂಪಾಯಿಗಳು ಉಳಿಯಬೇಕು ಆದರೆ, 37,791/-ರೂಪಾಯಿಗಳನ್ನು ಕೊರತೆ ಎಂದು ತೋರಿಸಲಾಗಿದೆ. ಶಾಲೆಯವರ ದಾಖಲೆಯಂತೆ ಒಟ್ಟು 3,64,678/-ರೂಪಾಯಿಗಳು ದುರ್ಬಳಕೆಯಾಗಿದೆ. ಈ ಬಗ್ಗೆ ಲೆಕ್ಕದಲ್ಲಿ ನಕಲಿ ಬಿಲ್ಲುಗಳನ್ನು ಸೃಷ್ಟಿಸಿ ಲಕ್ಷಾಂತರ ಹಣವನ್ನು ಬಿಡುಗಡೆ ಮಾಡಿಕೊಳ್ಳಲಾಗಿದೆ.

4) ಬಟ್ಟೆ ಖರೀದಿ ಮಾಡಿದ ಬಗ್ಗೆ ನಕಲಿ ಬಿಲ್ಲುಗಳನ್ನು ಸೃಷ್ಟಿಸಲಾಗಿದೆ. ಮೈಸೂರು ನಗರದ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ವಸ್ತ್ರಂ ಬಟ್ಟೆ ಅಂಗಡಿಯಲ್ಲಿ ಬಟ್ಟೆಗಳನ್ನು ಖರೀದಿ ಮಾಡಿರುವ ಬಗ್ಗೆ ಸುಳ್ಳು ಬಿಲ್ಲುಗಳನ್ನು ನೀಡಿ ಶಾಲೆಯಿಂದ ಹಣವನ್ನು ಬಿಡುಗಡೆ ಮಾಡಿಕೊಳ್ಳಲಾಗಿದೆ. ಇದೇ ಅಂಗಡಿಯಲ್ಲಿ ದಿನಾಂಕ 14/06/2015 ಮತ್ತು 31/12/2015 ಇತರೆ ದಿನಗಳಲ್ಲಿ ಬಟ್ಟೆಗಳನ್ನು ಖರೀದಿಸಿದಾಗ ಮಾದರಿ ಶಾಲೆ ಉನ್ನತೀಕರಣ ಸಮಿತಿ ಎಂದು ಬಿಲ್ ಮಾಡಿಸಿಕೊಳ್ಳಲಾಗಿದೆ. ಆದರೆ ಅದೇ ಅಂಗಡಿಯಲ್ಲಿ ದಿನಾಂಕ 23/08/2016, 13/08/2016, 21/11/2016 ಮತ್ತು

31/03/2017 ದಿನಾಂಕಗಳಲ್ಲಿ ಕೆ.ಆರ್.ಪೇಟೆ ಶಾಲೆ ಮೈಸೂರು ಎಂಬ ನಕಲಿ ಬಿಲ್ಲುಗಳನ್ನು 2,30,800/-ರೂಗಳನ್ನು ಬಿಡುಗಡೆ ಮಾಡಿಸಿಕೊಳ್ಳಲಾಗಿದೆ.

ಒಟ್ಟಾರೆ ಶಾಲೆಯಲ್ಲಿ ಸುಮಾರು ರೂ.5,43,287/- ಹಣ ನೇರವಾಗಿ ದುರ್ಬಳಕೆಯಾಗಿದೆ.

5) 1ನೇ ಎದುರುದಾರರಾದ ಹೆಚ್.ಎಲ್.ನಾಗರಾಜು ರವರು ದಿನಾಂಕ 27-7-2020 ರ ಆಕ್ಷೇಪಣೆ ಸಲ್ಲಿಸಿದ್ದು ಸದರಿ ಆಕ್ಷೇಪಣೆಯಲ್ಲಿ ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದಿದ್ದಾರೆ. ಮುಂದುವರೆದು ದಾನಿಗಳ ಆರ್ಥಿಕ ಸಹಾಯದಿಂದ ಸರ್ಕಾರಿ ಶಾಲೆಯನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ಕಾಮಗಾರಿಗೆ ಜಿಲ್ಲಾ ಪಂಚಾಯತಿಯಿಂದ ಹಣ ಬಿಡುಗಡೆ ಆಗಿರುವುದಿಲ್ಲ ಎಂದು ತಿಳಿಸಿದ್ದಾರೆ. ಫಿರ್ಯಾದಿದಾರರು ತಮ್ಮ ಫಿರ್ಯಾದಿಯಲ್ಲಿ ಮಾಡಿದ ಸಮವಸ್ತ್ರ ಖರೀದಿಯ ಅವ್ಯವಹಾರಕ್ಕೆ ಸಂಬಂಧಿಸಿದಂತೆ 1ನೇ ಎದುರುದಾರರು ತನ್ನ ದಿ: 27-7-2020 ರ ಆಕ್ಷೇಪಣೆಯಲ್ಲಿ ಯಾವುದೇ ಸ್ಪಷ್ಟ ವಿಷಯವನ್ನು ತಿಳಿಸಿರುವುದಿಲ್ಲ.

6) 2ನೇ ಎದುರುದಾರರಾದ ಎಸ್.ಲಕ್ಷ್ಮೀಕಾಂತ ತಂದೆ ಶಿವಣ್ಣ ಇವರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ಸದರಿ ಶಾಲೆಯ ದುರಸ್ಥಿ ಕಾಮಗಾರಿಗಾಗಿ ಅಂದಾಜು ಪಟ್ಟಿಯನ್ನು ತಯಾರಿಸಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ ರವರ ತಾಂತ್ರಿಕ ಅನುಮೋದನೆ ಸಂಖ್ಯೆ:429/2015-16 ದಿನಾಂಕ: 17-8-2015 ರ ಅನುಮೋದನೆಯೊಂದಿಗೆ ತುಂಡು ಗುತ್ತಿಗೆಯನ್ನು ಗುತ್ತಿಗೆದಾರರಿಗೆ ನೀಡಿ ಕಾಮಗಾರಿ ಪೂರೈಸಲಾಗಿದ್ದು ರೂ.1,99,441/- ಗಳಿಗೆ ಎಸ್.ಬಿ.ಆರ್ ಸಂಖ್ಯೆ:260/2015-16 ದಿನಾಂಕ: 22-12-2015 ರಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೆ.ಆರ್.ಪೇಟೆ ಕಛೇರಿಯಿಂದ ವಿಭಾಗ ಕಛೇರಿಗೆ ಬಿಲ್ ಅನ್ನು ಸಲ್ಲಿಸಲಾಗಿದ್ದು ಗುತ್ತಿಗೆದಾರರಿಗೆ ಹಣ ಪಾವತಿಯಾಗಿರುತ್ತದೆ ಮತ್ತು ಈ ದುರಸ್ಥಿಯ ಕಾಮಗಾರಿಯು ಜಿಲ್ಲಾ ಪಂಚಾಯತಿಯ ಮುಕಾನಿಅ:ಜಿಪಂಮಂ: ರವರ ಕಛೇರಿ ಪತ್ರ

ಸಂಖ್ಯೆ: ಉಕಾ-2: ಸಿ-2:ಅಅನು:01:2015-16 ದಿನಾಂಕ: 25-7-2015 ರಂದು ರೂ.2,00,000/- ಗಳಿಗೆ ಸೇರ್ಪಡೆಗೊಂಡು ಅನುಮೋದನೆ ಆಗಿರುತ್ತದೆ ಎಂದು ತಿಳಿಸಿರುತ್ತಾರೆ.

7) ಮೇಲಿನ ಆರೋಪ ಮತ್ತು ಅಂಶಗಳಿಗೆ ಸಂಬಂಧಿಸಿ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಡ್ಯ ಇವರಿಂದ ತನಿಖೆ ನಡೆಸಿ ವರದಿ ಪಡೆಯಲಾಗಿದೆ. ಸದರಿಯವರು ದಿನಾಂಕ 21-3-2021 ಹಾಗೂ ದಿನಾಂಕ 29-7-2022 ರ ತನಿಖಾ ವರದಿ ಮತ್ತು ಮುಂದುವರೆದ ತನಿಖಾ ವರದಿಗಳನ್ನು ಸಲ್ಲಿಸಿದ್ದಾರೆ.

8) ತನಿಖಾಧಿಕಾರಿಗಳು ತಮ್ಮ ತನಿಖಾ ವರದಿಯಲ್ಲಿ 3ನೇ ಎದುರುದಾರರಾದ ರವಿ ಕೆ. ಕಿರಿಯ ಇಂಜಿನಿಯರ್, ಜಿಲ್ಲಾ ಪಂಚಾಯತ್ ಮತ್ತು 4ನೇ ಎದುರುದಾರರಾದ ಹೆಚ್.ಕೆ.ಬಸವರಾಜು ಬಿನ್ ಕೃಷ್ಣೇಗೌಡ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಇವರು ಸುಳ್ಳು ದಾಖಲಾತಿ ಸೃಷ್ಟಿಸಿ ಸರ್ಕಾರಿ ಹಣ ದುರುಪಯೋಗಪಡಿಸಿಕೊಂಡಿರುವುದು ತನಿಖೆಯಲ್ಲಿ ಕಂಡುಬಂದಿದೆ ಎಂದು ವರದಿಸಿದ್ದಾರೆ. ಕಾರಣ 3 ಮತ್ತು 4ನೇ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿತ್ತು.

9) 3ನೇ ಎದುರುದಾರರು ದಿನಾಂಕ 17-10-2022 ರ ಹಾಗೂ 4ನೇ ಎದುರುದಾರರು ದಿನಾಂಕ 16-10-2022 ರ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ; 3ನೇ ಎದುರುದಾರರಾದ ಶ್ರೀ ರವಿ ಕೆ., ಕಿರಿಯ ಅಭಿಯಂತರರು ಮತ್ತು 4ನೇ ಎದುರುದಾರರಾದ ಶ್ರೀ ಹೆಚ್.ಕೆ. ಬಸವರಾಜು, ಸಹಾಯಕ ಕಾರ್ಯಪಾಲಕ ಅಭಿಯಂತರರು (ನಿವೃತ್ತ) ರವರು ಸಲ್ಲಿಸಿದ ಆಕ್ಷೇಪಣೆಗಳು ಒಂದಕ್ಕೊಂದು ಹೋಲಿಸಲಾಗಿ ಒಂದೇ ತರನಾಗಿರುವುದು ಕಂಡುಬರುತ್ತದೆ.

10) **3 ಮತ್ತು 4ನೇ ಎದುರುದಾರರ ಆಕ್ಷೇಪಣೆಗಳು:-**

ಸದರಿಯವರು ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು; ಕೆ.ಆರ್.ಪೇಟೆ ಟೌನಿನ ಶತಮಾನ ಶಾಲೆಯ ದುರಸ್ಥಿ ಕಾಮಗಾರಿಯು

ಕರ್ನಾಟಕ ಸರ್ಕಾರದ ನಿಯಮಾವಳಿಗಳ ಮಾರ್ಗಸೂಚಿಯಂತೆ ಪಂಚಾಯತ್ ರಾಜ್ ಇಲಾಖೆ ವತಿಯಿಂದ ನಿರ್ವಹಿಸಲಾಗಿದೆ; ಕ್ಷೇತ್ರ ಶಿಕ್ಷಣಾಧಿಕಾರಿ, ಕೆ.ಆರ್.ಪೇಟೆ ಹಾಗೂ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ ರವರು ದುರಸ್ಥಿ ಕಾಮಗಾರಿ ನಿರ್ವಹಿಸುವ ಬಗ್ಗೆ ಮೌಖಿಕವಾಗಿ ತಿಳಿಸಿದ್ದಾರೆ. ಅದರಂತೆ ದಿನಾಂಕ 25-7-2015 ರಂದು ಕಾಮಗಾರಿ ಅನುಮೋದನೆಗೊಂಡಿದೆ; ಎಸ್.ಡಿ.ಎಂ.ಸಿ. ಸಮಿತಿಯವರು ಕಾಮಗಾರಿ ನಿರ್ವಹಿಸಲು ಹಾಗೂ ಹಣ ಖರ್ಚು ಮಾಡಲು ಎಸ್.ಡಿ.ಎಂ.ಸಿ. ಸಭಾ ನಡುವಳಿಗಳಲ್ಲಿ ದಾಖಲಾಗಿರುವುದಿಲ್ಲ; ಮೋತಿ ಹಾರ್ಡ್‌ವೇರ್ ಮುಂಆಲಕ ರಮೇಶ ರವರು ನೀಡಿದರು ಎಂದು ಹೇಳಲಾದ ಬಿಲ್ ಅಸಲಿ ಬಿಲ್ ಆಗಿರುವುದಿಲ್ಲ; ಎಸ್.ಡಿ.ಎಂ.ಸಿ. ಕಮಿಟಿಯವರು ಕಾಮಗಾರಿ ಸಾಮಗ್ರಿಗಳನ್ನು ಖರೀದಿ ಮಾಡಿರುವ ಬಗ್ಗೆ ರಶೀದಿ ಪೂರೈಸಿಲ್ಲ; ಆದರೆ ತಮ್ಮ ಇಲಾಖೆಯಿಂದ ಅನುಮೋದನೆಗೊಂಡಿರುವ ಅಂದಾಜು ಪಟ್ಟಿಯಲ್ಲಿ ಸದರಿ ದಾಖಲಾತಿಗಳು ಇರುತ್ತವೆ; ಫಿರ್ಯಾದಿದಾರರು ಸದರಿ ಶಾಲೆಯ ಎಸ್.ಡಿ.ಎಂ.ಸಿ. ಸದಸ್ಯರಾಗಿದ್ದು ಹಾಗೂ ಮಾದರಿ ಶಾಲಾ ಉನ್ನತೀಕರಣ ಸಮಿತಿಯ ಸದಸ್ಯ ಕೂಡ ಆಗಿದ್ದು ಸದರಿಯವರೇ ಆರೋಪಗಳನ್ನು ಮಾಡಿದ್ದಾರೆ; ಶತಮಾನ ಶಾಲಾ ಕಾಮಗಾರಿ ಜಿಲ್ಲಾ ಪಂಚಾಯತ್ ಮಂಡ್ಯ ಇವರಿಂದ ಅನುಮೋದನೆಗೊಂಡು ಪೂರ್ಣಗೊಂಡಿದೆ; ಉನ್ನತೀಕರಣ ಸಮಿತಿಯವರಿಗೆ ದೊಡ್ಡ ಮೊತ್ತದ ಕಾಮಗಾರಿ ನಿರ್ವಹಿಸುವ ಸಾಮರ್ಥ್ಯ ಇರುವುದಿಲ್ಲ; ಪಂಚಾಯತ್ ರಾಜ್ ಇಲಾಖೆ ಮಂಡ್ಯ ರವರಿಂದ ಶತಮಾನ ಶಾಲೆ ದುರಸ್ಥಿ ಕಾಮಗಾರಿಯನ್ನು ಅಧಿಕೃತ ಜ್ಞಾಪನ ಪತ್ರ ದಿ: 25-7-2015 ರಂತೆ ಅಂದಾಜು ಪಟ್ಟಿ ತಯಾರಿಸಿ ದಿನಾಂಕ 14-8-2015 ರಂತೆ ಆಡಳಿತಾತ್ಮಕ ಅನುಮೋದನೆ ಪಡೆದು ದಿನಾಂಕ 17-8-2015 ರಂತೆ ತಾಂತ್ರಿಕ ಮಂಜೂರಾತಿ ಪಡೆದು ತುಂಡು ಗುತ್ತಿಗೆ ಪ್ರಸ್ತಾವನೆ ಸಲ್ಲಿಸಿ ದಿನಾಂಕ 29-10-2015 ರಂತೆ ತುಂಡು ಗುತ್ತಿಗೆ ಕರಾರು ಮಾಡಿ ಸದರಿ ಕಾಮಗಾರಿಯನ್ನು ದಿನಾಂಕ 5-11-2015 ರಂದು ಪ್ರಾರಂಭಿಸಿ ದಿನಾಂಕ 17-12-2015 ರಂದು ಪೂರ್ಣಗೊಳಿಸಿ ಕಾಮಗಾರಿ ಬಿಲ್ಲು ತಯಾರಿಸಿ ಹಣ ಪಾವತಿಗಾಗಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ ಇವರಿಗೆ ಸಲ್ಲಿಸಿ

ಸದರಿಯವರಿಂದ ಅಳತೆ ಪರಿಶೀಲನೆ ಆಗಿ ವಿವಿಧ ಹಂತದ ಛಾಯಾಚಿತ್ರಗಳನ್ನು ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಪರಿಶೀಲನೆಗೊಂಡ ನಂತರ ಬಿಲ್ಲಿನ ಮೊತ್ತವನ್ನು ಪಾವತಿಸಲಾಗಿದೆ; ನಿಯಮಾವಳಿಯಂತೆ ಪಾರದರ್ಶಕತೆಯಿಂದ ನಿರ್ವಹಿಸಿದ್ದು ಸದರಿ ಕಾಮಗಾರಿಯಲ್ಲಿ ಯಾವುದೇ ಹಣ ದುರುಪಯೋಗ ಆಗಿರುವುದಿಲ್ಲ ಎಂದು ಆಕ್ಷೇಪಣೆ ಸಲ್ಲಿಸಿದ್ದಾರೆ.

11) 3 ಮತ್ತು 4ನೇ ಎದುರುದಾರರು ತಮ್ಮ ಪರವಾಗಿ ಈ ಕೆಳಗಿನ ದಾಖಲೆಗಳನ್ನು ಸಲ್ಲಿಸಿರುವುದಾಗಿ ನಮೂದಿಸಿದ್ದಾರೆ;

1) ಕಾಮಗಾರಿಯು ಅನುಮೋದನೆಗೊಂಡಿರುವ ಕ್ರಿಯಾ ಯೋಜನೆಯ ಪಟ್ಟಿ ಕಾಮಗಾರಿಯ ಅಂದಾಜು ಪಟ್ಟಿ.
2) ಕಾಮಗಾರಿಯನ್ನು ನಿರ್ವಹಿಸಲು ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮಂಡ್ಯ ರವರು ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ಹಾಗೂ ತಾಂತ್ರಿಕ ನೀಡಿರುವುದು.
3) ಕಾಮಗಾರಿಯನ್ನು ನಿರ್ವಹಿಸಲು ಗುತ್ತಿಗೆದಾರರಿಗೆ ತುಂಡು ಗುತ್ತಿಗೆ ಕರಾರಿನ ಪ್ರಸ್ತಾವನೆಯ ಪತ್ರ ಮತ್ತು ಕಾರ್ಯಾದೇಶದ ಪತ್ರ.
4) ಕಾಮಗಾರಿಯನ್ನು ನಿರ್ವಹಣೆ ಮಾಡಿರುವ ಬಗ್ಗೆ ವಿವರ ಹಾಗೂ ಹಣ ಪಾವತಿ ಮಾಡಲು ಸಿದ್ಧಪಡಿಸಿರುವ ಬಿಲ್ ಪ್ರತಿಗಳು.
5) ಕಾಮಗಾರಿಗೆ ಸಂಬಂಧಿಸಿದ ಎಂ.ಬಿ.ಪುಸ್ತಕದ ಜೆರಾಕ್ಸ್ ಪ್ರತಿಗಳು.
6) ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿ ಕಾಮಗಾರಿಯನ್ನು ಶಿಕ್ಷಣ ಇಲಾಖೆಯ ಅಧಿಕಾರಿಗಳು ಪರಿಶೀಲನೆ ಮಾಡುತ್ತಿರುವ ಹಾಗೂ ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿ ತೆಗೆದಿರುವ ವಿವಿಧ ಹಂತದ ಛಾಯಾಚಿತ್ರಗಳ ಪ್ರತಿಗಳು.

12) ಎದುರುದಾರರ ಮೇಲಿನ ಆರೋಪ, ಎದುರುದಾರರ ಆಕ್ಷೇಪಣೆ, ತನಿಖಾಧಿಕಾರಿಗಳ ವರದಿ ಮತ್ತು ಹಾಜರುಪಡಿಸಲಾದ ದಾಖಲಾತಿಗಳನ್ನು ಪರಿಶೀಲಿಸಿದಾಗ ಈ ಕೆಳಗಿನ ಅಂಶಗಳು ಕಂಡುಬರುತ್ತವೆ;

- ದಿನಾಂಕ: 11-1-2021 ರ ಪತ್ರದೊಂದಿಗೆ 1ನೇ ಎದುರುದಾರರು ಸದರಿ ಶಾಲೆಗೆ ಸಂಬಂಧಿಸಿದಂತೆ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ ಮತ್ತು ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆಯುಕ್ತರ ಆರ್ಥಿಕ ಸಲಹೆಗಾರರು, ಆಯುಕ್ತರ ಕಛೇರಿ, ಬೆಂಗಳೂರು ಇವರ ತಪಾಸಣಾ ವರದಿಗಳ ಪ್ರತಿಗಳನ್ನು ಹಾಜರಿಸಿರುತ್ತಾರೆ. ಸದರಿ ವರದಿಗಳಲ್ಲಿ ದೂರುದಾರರು ಆರೋಪಿಸಿದಂತೆ ಹಣಕಾಸಿನ ದುರುಪಯೋಗ ಆಗಿರುವುದಿಲ್ಲ ಎಂದು ತಿಳಿಸಲಾಗಿದ್ದರೂ ಸಹ ಆದರೆ ದಾಖಲೆಗಳ ನಿರ್ವಹಣೆ ಕ್ರಮಬದ್ಧವಾಗಿರುವುದಿಲ್ಲ ಮತ್ತು ಕೆಲವು ಖರೀದಿಯಲ್ಲಿ ಯಾವುದೇ ಟೆಂಡರ್ ನಿಯಮ ಪಾಲನೆ ಆಗಿರುವುದಿಲ್ಲ ಎಂದು ತಿಳಿಸಲಾಗಿದೆ.
- ಕೆ.ಆರ್.ಪೇಟೆ ಟೌನ್, ಬಿ.ಇ.ಓ. ಕಛೇರಿ ಮುಂಭಾಗದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ದುರಸ್ಥಿ ಕಾಮಗಾರಿಗೆ ಖರ್ಚು ಮಾಡಲಾದ ಹಣ ಯಾವುದು ಎನ್ನುವ ವಿಷಯದಲ್ಲಿ 1 ಮತ್ತು 2ನೇ ಎದುರುದಾರು ಅವರ ಆಕ್ಷೇಪಣೆಗಳಲ್ಲಿ ತಿಳಿಸಿರುವ ವಿಷಯವು ಪರಸ್ಪರ ವ್ಯತಿರಿಕ್ತವಾಗಿರುತ್ತದೆ.
- ಫಿರ್ಯಾದಿದಾರರು ಸಂಬಂಧಪಟ್ಟ ಶಿಕ್ಷಣ ಇಲಾಖೆಗೆ ಫಿರ್ಯಾದಿ ಸಲ್ಲಿಸಿದ ತಕ್ಷಣ ಶಾಲೆಯವರು ನಾಮಫಲಕಕ್ಕೆ ಮತ್ತೆ ಬಣ್ಣ ಬಳಸಿ ನಾಮಫಲಕ ಕಾಣದಂತೆ ಸಾಕ್ಷಿ ನಾಶ ಮಾಡಿದ್ದಾರೆಂದು ಆರೋಪಿಸಿದ್ದಾರೆ.
- ಶಾಲಾ ಉನ್ನತೀಕರಣ ಸಮಿತಿಯವರು ನೀಡಿರುವ ದಾಖಲಾತಿಗಳಿಗೆ 1ನೇ ಎದುರುದಾರರೇ ಸಹಿ ಮಾಡಿರುವುದು ಕಂಡುಬರುತ್ತದೆ. 2015 ರಿಂದ 2017ನೇ ಸಾಲಿನವರೆಗೆ ಸಂಬಂಧಿಸಿದ ಬಟ್ಟೆ, ಶ್ಯೂ, ಪುಸ್ತಕ ಮತ್ತು ಬೆಲ್ಟ್ ಖರೀದಿ ವ್ಯವಹಾರಗಳಿಗೆ ಸಂಬಂಧಿಸಿದ ದಾಖಲೆಗಳಿಗೆ 1ನೇ ಎದುರುದಾರರೇ ಸಹಿ ಮಾಡಿದ್ದಾರೆ.
- ಸರ್ಕಾರಿ ಶಾಲೆಯ ಕಟ್ಟಡವನ್ನು ಅಭಿವೃದ್ಧಿ ಅನುದಾನ ಲೆಕ್ಕ ಶಿರ್ಷಿಕೆ ಅಡಿಯಲ್ಲಿ ಮಾಡಿ ದುರಸ್ಥಿ ಮಾಡಿದ ನಾಮಫಲಕ ಬರೆಯಲಾಗಿದೆ ಹಾಗೂ ಇದೇ ಕಾಮಗಾರಿ ತೋರಿಸಿ ಮೋತಿ ಹಾರ್ಡ್‌ವೇರಗೆ ಹಾಗೂ ಮೆಟ್ಟಿಲು ನಿರ್ಮಾಣಕ್ಕೆಂದು, ಬಣ್ಣ ಹೊಡೆದಿರುವ ಲೇಬಲಗೆ ಎಂದು ಉನ್ನತೀಕರಣ ಸಮಿತಿ ಖಾತೆಯಿಂದ ಹಣ ಬಿಡುಗಡೆ ಮಾಡಲಾಗಿದೆ ಎಂಬುದು ಫಿರ್ಯಾದಿದಾರರ ಆರೋಪವಾಗಿದೆ. ಈ ರೀತಿ ಒಂದೇ ಕಾಮಗಾರಿಗೆ ಎರಡು ಕಡೆಯಲ್ಲಿ ಹಣ ಬಿಡುಗಡೆ ಮಾಡಿ ಹಣ ದುರ್ಬಳಕೆ ಮಾಡಲಾಗಿದೆ ಎಂಬುದು ಫಿರ್ಯಾದಿದಾರರ

ಹೇಳಿಕೆಯಾಗಿದೆ. ಈ ಆರೋಪಗಳ ಕುರಿತು 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ಯಾವುದೇ ವಿಶೇಷ ಉಲ್ಲೇಖ ಮಾಡಿರುವುದಿಲ್ಲ.

- ಶಾಲಾ ಉನ್ನತೀಕರಣ ಸಮಿತಿಯು ನೋಂದಾಯಿತ ಸಮಿತಿ ಆಗಿರುವುದಿಲ್ಲ ಎಂಬುದು ತನಿಖಾಧಿಕಾರಿಯ ವರದಿಯಲ್ಲಿ ಕಂಡುಬರುತ್ತದೆ. ಪೋಷಕರ ದಾನದ ಹಣದಿಂದ ಸಮವಸ್ತ್ರ, ಪುಸ್ತಕ, ಶ್ಯೂ, ಸಾಕ್ಸ್, ಗುರುತಿನ ಚೀಟಿ, ಬೆಲ್ಟ್ ಮುಂತಾದ ಸಾಮಗ್ರಿಗಳಿಗಾಗಿ ಮಾಡಿದ ಹಣ ಬಾರಿ ಮೊತ್ತವಾಗಿದ್ದು ಅದರ ಕುರಿತು 1 ಮತ್ತು 2ನೇ ಎದುರುದಾರರ ಆಕ್ಷೇಪಣೆಗಳನ್ನು ಪರಿಶೀಲಿಸಿದಾಗ ದಾನಿಗಳ ಆರ್ಥಿಕ ಸಹಾಯದಿಂದ ಸರ್ಕಾರಿ ಶಾಲೆಯನ್ನು ಅಭಿವೃದ್ಧಿಪಡಿಸಲಾಗಿದ್ದು ಈ ಕಾಮಗಾರಿಗೆ ಜಿಲ್ಲಾ ಪಂಚಾಯತಿಯಿಂದ ಹಣ ಬಿಡುಗಡೆ ಆಗಿರುವುದಿಲ್ಲ ಎಂದು ತಿಳಿಸಿದ್ದು ಸಮವಸ್ತ್ರ ಖರೀದಿಯ ಅವ್ಯವಹಾರಕ್ಕೆ ಸಂಬಂಧಿಸಿ 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಯಾವುದೇ ಸ್ಪಷ್ಟ ವಿಷಯವನ್ನು ತಿಳಿಸಿರುವುದಿಲ್ಲ. ದಾಖಲೆಗಳ ನಿರ್ವಹಣೆ ಕ್ರಮಬದ್ಧವಾಗಿರುವುದಿಲ್ಲ ಹಾಗೂ ಕೆಲವು ಖರೀದಿಯಲ್ಲಿ ಯಾವುದೇ ಟೆಂಡರ್ ನಿಯಮ ಪಾಲನೆ ಆಗಿರುವುದಿಲ್ಲ ಎಂಬ ಅಂಶವನ್ನು ಪರಿಗಣಿಸಬೇಕಾಗುತ್ತದೆ. ಹೀಗಾಗಿ ಮೇಲಿನ ಅಂಶಗಳನ್ನು ಸಂದರ್ಭಾನುಸಾರ ಬೇರೆ ಬೇರೆಯಾಗಿ ಪರಿಶೀಲಿಸದೇ ಒಟ್ಟಾಗಿ ಜಂಟಿ ವಿಚಾರಣೆಯಲ್ಲಿ ನಿರ್ಧರಿಸಬೇಕಾಗುತ್ತದೆ. ಮೇಲಾಗಿ ದಾನದ ಹಣ ಎಂದು ಹೇಳಲಾದ ಅಂಶ ಉಳಿದ ಆರೋಪಗಳ ಜೊತೆ ಜಂಟಿ ವಿಚಾರಣೆಯಲ್ಲಿ ನಿರ್ಧರಿಸಬೇಕಾದ ಅಂಶವಾಗಿದೆ. ಈ ಕುರಿತು ತನಿಖಾ ವರದಿಯಲ್ಲಿ ಕೂಡ ಸ್ಪಷ್ಟವಾದ ಅಭಿಪ್ರಾಯ ಕಂಡುಬರುವುದಿಲ್ಲ.
- ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ ಮಾದರಿ ಶಾಲೆಯ ಕಾಮಗಾರಿಯನ್ನು ದಾನಿಗಳ ಹಾಗೂ ಪೋಷಕರ ಕಡೆಯಿಂದ ಸಂಗ್ರಹಿಸಿದ ಹಣದಿಂದ ನಿರ್ವಹಣೆ ಮಾಡಲಾಗಿದೆ ಎಂಬ ಅಂಶವನ್ನು ಜಂಟಿ ವಿಚಾರಣೆಯ ಮೂಲಕವೇ ಕಂಡುಕೊಳ್ಳುವುದು ಸೂಕ್ತವಾಗಿದೆ.
- ಶಾಲಾ ದುರಸ್ಥಿ ಹೆಸರಿನಲ್ಲಿ ಹಣ ದುರುಪಯೋಗವಾಗಿರುವ ಅಂಶವು ತನಿಖಾ ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖವಾಗಿದೆ.
- ಕಾಮಗಾರಿ ಅವಧಿಯನ್ನು ಸಹ ವರದಿಗಳಲ್ಲಿ ಬೇರೆ ಬೇರೆಯಾಗಿ ತೋರಿಸಿರುವುದು ಅನುಮಾನಕ್ಕೆ ಎಡೆ ಮಾಡಿಕೊಡುತ್ತದೆ.

- 3 ಮತ್ತು 4ನೇ ಎದುರುದಾರರು ಹಾಜರುಪಡಿಸಿದ ದಾಖಲೆಗಳು ಸಂದರ್ಭಾನುಸಾರ ಇಲಾಖಾ ವಿಚಾರಣೆಯ ಮೂಲಕವೇ ನಿರ್ಧರಿಸಬೇಕಾದ ದಾಖಲೆಗಳಾಗಿದ್ದು ಈ ಹಂತದಲ್ಲಿ ಸದರಿ ದಾಖಲೆಗಳ ಬಗ್ಗೆ ಯಾವುದೇ ಪಕ್ಷದವರ ಪರ ಅಥವಾ ವಿರೋಧವಾಗಿ ನಿರ್ಧಾರಕ್ಕೆ ಬರಲಾಗದು.
- 1ನೇ ಎದುರುದಾರರ ಕ್ರಮವು ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷನಾಗಿಯಾಗಲೀ ಅಥವಾ ಸದರಿ ಆಯೋಗದ ಒಬ್ಬ ಸದಸ್ಯನಾಗಿಯಾಗಲೀ ಕೈಗೊಂಡ ಕ್ರಮವಾಗಿರುವುದಿಲ್ಲ. ಮೇಲಾಗಿ ತಾನು ಒತ್ತಾಯಪೂರ್ವಕವಾಗಿ ಉನ್ನತೀಕರಣ ಸಮಿತಿಯ ಅಧ್ಯಕ್ಷನಾಗಿ ಜವಾಬ್ದಾರಿ ವಹಿಸಿಕೊಂಡಿರುವುದಾಗಿ 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹೇಳಿಕೊಂಡಿದ್ದಾರೆ. ಕಾಮಗಾರಿಗಳಿಗೆ ಜಿಲ್ಲಾ ಪಂಚಾಯತಿಯಿಂದ ಸದರಿ ಶಾಲೆಗಾಗಲೀ ಉನ್ನತೀಕರಣ ಸಮಿತಿ ಖಾತೆಗಾಗಲೀ ಹಣ ಬಿಡುಗಡೆ ಆಗಿರುವುದಿಲ್ಲ ಎಂಬ ಅಂಶ ವಿಚಾರಣೆ ಮೂಲಕ ತೀರ್ಮಾನವಾಗಬೇಕಾದ ಅಂಶವಾಗಿದ್ದು ಈ ಹಂತದಲ್ಲಿ 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಈ ಕುರಿತು ಹೇಳಿದ ಅಂಶವನ್ನು ಒಪ್ಪಿಕೊಳ್ಳಲಾಗದು. ಮೇಲಾಗಿ ನೋಂದಾಯಿತವಲ್ಲದ ಉನ್ನತೀಕರಣ ಸಮಿತಿಯ ಅಧ್ಯಕ್ಷನಾಗಿರುವುದನ್ನು 1ನೇ ಎದುರುದಾರರೇ ಒಪ್ಪಿಕೊಂಡಿರುತ್ತಾರೆ.
- 1 ರಿಂದ 4ನೇ ಎದುರುದಾರರ ನಿವೃತ್ತಿ ದಿನಾಂಕಗಳು ಈ ಕೆಳಗಿನಂತಿವೆ;

  1ನೇ ಎದುರುದಾರರಾದ **ಡಾ॥ ಎಸ್.ಎಲ್. ನಾಗರಾಜ್** ಇವರ **ನಿವೃತ್ತಿ ದಿನಾಂಕ 28-2-2035;**
  2ನೇ ಎದುರುದಾರರಾದ **ಶ್ರೀ ಎಸ್.ಲಕ್ಷ್ಮೀಕಾಂತ್** ಇವರ **ನಿವೃತ್ತಿ ದಿನಾಂಕ 31-8-2025**
  3ನೇ ಎದುರುದಾರರಾದ **ಶ್ರೀ ಕೆ. ರವಿ ಬಿನ್ ದಿ.ಕಾಳಯ್ಯ,** ಇವರ ನಿವೃತ್ತಿ ದಿನಾಂಕ 31-7-2035;
  4ನೇ ಎದುರುದಾರರಾದ **ಶ್ರೀ ಹೆಚ್.ಕೆ. ಬಸವರಾಜು,** ಇವರ **ನಿವೃತ್ತಿ ದಿನಾಂಕ 30-4-2021.**

13) ಮೇಲಿನ ಕಾರಣಗಳಿಂದ ಹಾಗೂ ಕಡತವನ್ನು ಪರಿಶೀಲಿಸಿದಾಗ 1 ರಿಂದ 4ನೇ ಎದುರುದಾರರಾದ (1) **ಡಾ॥ ಎಸ್.ಎಲ್. ನಾಗರಾಜ್, (2) ಶ್ರೀ ಎಸ್.ಲಕ್ಷ್ಮೀಕಾಂತ್,** (3)

**ಶ್ರೀ ಕೆ. ರವಿ ಬಿನ್ ದಿ.ಕಾಳಯ್ಯ ಮತ್ತು (4) ಶ್ರೀ ಹೆಚ್.ಕೆ. ಬಸವರಾಜು ರವರು** ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿರುತ್ತದೆ.

14) ಆದುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ; ಈ ಮೂಲಕ 1 ರಿಂದ 4ನೇ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು 4ನೇ ಎದುರುದಾರರಾದ ಶ್ರೀ ಹೆಚ್.ಕೆ. ಬಸವರಾಜು ರವರು ಸರ್ಕಾರಿ ಕರ್ತವ್ಯದಿಂದ ವಯೋನಿವೃತ್ತಿ ಹೊಂದಿರುವ ಕಾರಣ ಸದರಿ ನಿವೃತ್ತಿ ಅಧಿಕಾರಿ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ನಿಯಮ 214(2)(ಬಿ)(ii)ರಡಿ ಅನುಮತಿ ನೀಡಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಉಪಲೋಕಾಯುಕ್ತರು-2 ರವರಿಗೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

15) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

17/8/23

**(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)**
**ಉಪಲೋಕಾಯುಕ್ತರು**
**ಕರ್ನಾಟಕ ರಾಜ್ಯ**